# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 378 (2816)
2. ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 29.03.2022
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಕೈಗಾರಿಕಾ ಪ್ರದೇಶ ನಿರ್ಮಿಸಲು ರೈತರಿಂದ ವಶಪಡಿಸಿಕೊಂಡ ಜಮೀನು ಎಷ್ಟು; | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳ ವತಿಯಿಂದ ಕೈಗಾರಿಕಾ ಪ್ರದೇಶಕ್ಕಾಗಿ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಕಸಬಾ ಹೋಬಳಿ, ಮುದಿಗೆರೆಕಾವಲ್ ಗ್ರಾಮದ ಒಟ್ಟು 2051-24 ಎಕರೆ ಜಮೀನನ್ನು 2010ನೇ ಸಾಲಿನಲ್ಲಿ ಹಾಗೂ 29-26 ಎಕರೆ ಜಮೀನನ್ನು 2019ನೇ ಸಾಲಿನಲ್ಲಿ (ಒಟ್ಟು 2081-10 ಎಕರೆ) ಅಂತಿಮ ಅಧಿಸೂಚನೆ ಮುಖಾಂತರ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. |
| (ಆ) | ಕೈಗಾರಿಕಾ ಪ್ರದೇಶ ನಿರ್ಮಿಸಲು ರೈತರಿಂದ ಜಮೀನು ವಶಪಡಿಸಿಕೊಳ್ಳಲು ಅನುಸರಿಸುವ ಮಾನದಂಡ ಯಾವುದು; (ಪ್ರತಿ ಒದಗಿಸುವುದು) | ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳುವ ಪ್ರದೇಶದಲ್ಲಿನ ಕೈಗಾರಿಕಾ ನಿವೇಶನಗಳಿಗೆ ಇರುವ ಬೇಡಿಕೆಗಳಿಗೆ ಅನುಗುಣವಾಗಿ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಕಾರ್ಯಪಾಲಕ ಅಭಿಯಂತರರು, ಕೆ.ಐ.ಎ.ಡಿ.ಬಿ. ಹಾಗೂ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಸಹಯೋಗದೊಂದಿಗೆ ನಿರ್ದಿಷ್ಟ ಸ್ಥಳಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಜಮೀನುಗಳನ್ನು ಗುರುತಿಸಿದ ನಂತರ, ಮಂಡಳಿ ಸಭೆಯ ಅನುಮೋದನೆ ಪಡೆದು ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆಯಲ್ಲಿನ ನಿರ್ದೇಶನದ ಅನುಸಾರ ಕೆಐಎಡಿ ಕಾಯ್ದೆ 1966 ರಡಿ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. |

| | | |
|---|---|---|
| (ಇ) | ಸರ್ಕಾರ ಕೈಗಾರಿಕಾ ಪ್ರದೇಶ ನಿರ್ಮಿಸಲು ವಶಪಡಿಸಿಕೊಂಡ ಜಮೀನಿಗೆ ಒಂದು ಎಕರೆಗೆ ಎಷ್ಟು ಹಣವನ್ನು ರೈತರಿಗೆ ನೀಡಲಾಗಿದೆ: | ದಿನಾಂಕ: 21.12.2013 ರಂದು ನಡೆದ 327ನೇ ಮಂಡಳಿ ಸಭೆಯಲ್ಲಿ ಮುದಿಗೆರೆಕಾವಲ್ ಗ್ರಾಮದಲ್ಲಿ ಸ್ವಾಧೀನಪಡಿಸಿದ 2051-24 ಎಕರೆ ಜಮೀನಿನ ಪೈಕಿ 751-00 ಎಕರೆ ಜಮೀನಿಗೆ ನಿಗದಿಪಡಿಸಿರುವ ಪರಿಹಾರದ ವಿವರ ಈ ಕೆಳಕಂಡಂತಿದೆ:-<br>1. ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತಿರುವ ಜಮೀನುಗಳಿಗೆ ಅಂದರೆ (ಅಡಿಕೆ, ತೆಂಗು ಇದ್ದಲ್ಲಿ) ಎಕರೆಯೊಂದಕ್ಕೆ ರೂ.35.00 ಲಕ್ಷ<br>2. ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಅಡಿಕೆ, ತೆಂಗು ಇಲ್ಲದಿದ್ದಲ್ಲಿ ಎಕರೆಯೊಂದಕ್ಕೆ ರೂ.30.00 ಲಕ್ಷ<br>3. ಭೂಸ್ವಾಧೀನಗೊಂಡಿರುವ ಉಳಿಕೆ ತರಿ ಮತ್ತು ಭಾಗಾಯ್ತು ಜಮೀನುಗಳಿಗೆ ಎಕರೆಯೊಂದಕ್ಕೆ ರೂ.25.00 ಲಕ್ಷ<br>4. ಭೂಸ್ವಾಧೀನಗೊಂಡಿರುವ ಖುಷ್ಕಿ ಮತ್ತು ಸಾಗುವಳಿ ಮಾಡದ ಜಮೀನುಗಳಿಗೆ ಎಕರೆಯೊಂದಕ್ಕೆ ರೂ. 18.00 ಲಕ್ಷ<br>5. ಭೂಪರಿವರ್ತನೆಗೊಂಡ ಜಮೀನುಗಳಲ್ಲಿ ರಾಷ್ಟ್ರೀಯ ಹೆದ್ದಾರಿ -4 ರ ಪಕ್ಕದ ನಿವೇಶನಗಳಿಗೆ ಚ.ಅಡಿಗೆ ರೂ.250/- ಮತ್ತು ಉಳಿದ ನಿವೇಶನಗಳಿಗೆ ರೂ.180/-ಗಳು<br>ದಿನಾಂಕ: 12.07.2019ರಂದು ಮುದಿಗೆರೆಕಾವಲ್ ಗ್ರಾಮದ 29-26 ಎಕರೆ ಜಮೀನಿಗೆ ನಿಗಧಿಪಡಿಸಲಾದ ಒಪ್ಪಂದದ ದರ ಈ ಕೆಳಕಂಡಂತಿದೆ:-<br>1. ಕೃಷಿ ಜಮೀನಿಗೆ ಎಕರೆ ಒಂದಕ್ಕೆ ರೂ.30.00 ಲಕ್ಷ<br>2. ಭೂಪರಿವರ್ತಿತ ಜಮೀನಿಗೆ ಎಕರೆ ಒಂದಕ್ಕೆ ರೂ.33.00 ಲಕ್ಷ |
| (ಈ) | ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ | ಕೆ.ಐ.ಎ.ಡಿ.ಬಿ.ಯಲ್ಲಿ ಜಮೀನು ಹಂಚಿಕೆಗೆ ಪ್ರಸ್ತುತ ಇರುವ ಮಾನದಂಡಗಳನ್ನು ಅನುಬಂಧದಲ್ಲಿ ಒದಗಿಸಿದೆ. |

ಕೈಗಾರಿಕೋದ್ಯಮಿಗಳಿಗೆ ವಿತರಿಸಲು ಅನುಸರಿಸುವ ಮಾನದಂಡ ಯಾವುದು; ಇಲ್ಲಿಯವರೆಗೆ ಎಷ್ಟು ಪ್ರದೇಶವನ್ನು ಉದ್ಯಮಿಗಳಿಗೆ ವಿತರಿಸಲಾಗಿದೆ; ಉಳಿಕೆ ಇರುವ ಕೈಗಾರಿಕಾ ಪ್ರದೇಶ ಎಷ್ಟು?

ಮೊದಲನೇ ಹಂತದ ಶಿರಾ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆಗೆ ಲಭ್ಯವಾದ 427.56 ಎಕರೆ ಜಮೀನಿನ ಪೈಕಿ ಒಟ್ಟು 265.61 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದ್ದು, ಹಂಚಿಕೆಯ ವಿವರಗಳು ಕೆಳಕಂಡಂತಿದೆ:

| ಕ್ರ. ಸಂ. | ವರ್ಗ | ಘಟಕಗಳ ಸಂಖ್ಯೆ (No of Units) | ಹಂಚಿಕೆ ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| 1 | ಸಾಮಾನ್ಯ ವರ್ಗ | 40 | 84.88 |
| 2 | ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ | 109 | 86.23 |
| 3 | ಹಿಂದುಳಿದ ವರ್ಗ | 20 | 12.83 |
| 4 | ಲ್ಯಾಂಡ್ ಶೇರಿಂಗ್ ಅಡಿ ಭೂಸಂತ್ರಸ್ಥರು | 3 | 3.23 |
| 5 | ಕೆ.ಎಸ್.ಎಸ್.ಐ.ಡಿ.ಸಿ (ಮೀಸಲಿಡಲಾಗಿದೆ) | – | 78.44 |
| | ಒಟ್ಟು | 172 | 265.61 |

162 ಎಕರೆ ಜಮೀನು ಹಂಚಿಕೆಗೆ ಬಾಕಿ ಉಳಿದಿದ್ದು, ಈ ಜಮೀನಿಗಳಿಗೂ ಸಹ ಈಗಾಗಲೇ SLSWCC & DLSWCC ಸಭೆಗಳಲ್ಲಿ ಯೋಜನೆ ಅನುಮೋದನೆಗೆ ಅರ್ಜಿಗಳು ಸ್ವೀಕೃತಿಯಾಗುತ್ತಿದೆ.

ಮೇಲ್ಕಂಡ ವಿಸ್ತೀರ್ಣವನ್ನು ಹೊರತುಪಡಿಸಿ, ಭೂಸ್ವಾಧೀನಕ್ಕೆ ಒಳಪಟ್ಟ ಒಟ್ಟು 2081-10 ಎಕರೆ ಜಮೀನಿನ ಪೈಕಿ 818-27 ಎಕರೆ ಸರ್ಕಾರಿ ಜಮೀನು ಕೆ.ಐ.ಎ.ಡಿ.ಬಿ.ಗೆ ಹಸ್ತಾಂತರವಾಗಿರುತ್ತದೆ ಹಾಗೂ ಬಾಕಿ ಇರುವ ಖಾಸಗಿ ಜಮೀನಿಗೆ ಭೂದರ ನಿಗಧಿಪಡಿಸುವಂತೆ ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ ಇವರನ್ನು ಕೋರಲಾಗಿರುತ್ತದೆ.

ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ 2ನೇ ಹಂತದ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದ ನಂತರ ಕೈಗಾರಿಕಾ ಯೋಜನೆಗಳಿಗೆ ಜಮೀನು ಹಂಚಿಕೆಗೆ ಮತ್ತೆ ಲಭ್ಯವಾಗುತ್ತದೆ.

ಸಂಖ್ಯೆ: ಸಿಐ 137 ಐಎಪಿ(ಇ) 2022

(ಡಾ॥ ಮುರುಗೇಶ್ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಅನುಬಂಧ-

## ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು

## ಕೈಗಾರಿಕಾ ನಿವೇಶನಗಳ ಹಂಚಿಕೆಯ ನಿಯಮಾವಳಿಗಳು

ಕೈಗಾರಿಕಾ ಉದ್ದೇಶಿತ ಯೋಜನೆಗಳಿಗೆ ಸರ್ಕಾರವು ಭೂಮಿಯನ್ನು ಕೆಐಎಡಿಬಿ ಮೂಲಕ ಕೈಗಾರಿಕೆಗಳಿಗೆ ಹಂಚಿಕೆ ಮಾಡಲು ಈ ಕೆಳಕಂಡ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದ ನಂತರ, ನಿಗದಿತ ಅರ್ಜಿ ನಮೂನೆಯೊಂದಿಗೆ ಮಂಡಳಿಯ ಕೇಂದ್ರ ಕಛೇರಿಗಳಿಗೆ/ ವಲಯ ಕಛೇರಿಗಳಿಗೆ ನಿವೇಶನ ಹಂಚಿಕೆಗಾಗಿ ಅರ್ಜಿಗಳನ್ನು ಸಲ್ಲಿಸಬೇಕಾಗುವುದು.

| | |
|---|---|
| ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿ. | ರೂ. 500 ಕೋಟಿಗಳಿಗೂ ಮೀರಿದ ಬಂಡವಾಳ ಹೂಡಿಕೆಯ ಯೋಜನೆಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. |
| ಕರ್ನಾಟಕ ಸರ್ಕಾರದ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡುವ ಸಮಿತಿ. | ರಾಜ್ಯದಲ್ಲಿ ರೂ. 15 ಕೋಟಿಗಳಿಗಿಂತ ಹೆಚ್ಚಿನ ಮತ್ತು ರೂ. 500 ಕೋಟಿಗಳ ಒಳಗಿನ ಬಂಡವಾಳ ಹೂಡಿಕೆಯ ಕೈಗಾರಿಕಾ ಯೋಜನೆಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. |
| ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ. | ರೂ.15 ಕೋಟಿಗಳವರೆಗೆ ಬಂಡವಾಳ ಹೂಡುವ ಸಣ್ಣ ಕೈಗಾರಿಕಾ ಘಟಕಗಳ ಅರ್ಜಿಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. |

ನಿವೇಶನ ಕೋರಿ ನಿಗದಿತ ಅರ್ಜಿಗಳ ಜೊತೆಯಲ್ಲಿ ಈ ಕೆಳಕಂಡ ದಾಖಲೆಗಳೊಂದಿಗೆ ಕೆ.ಐ.ಎ.ಡಿ.ಬಿ. ಕಛೇರಿಗೆ ಅಥವಾ ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿಗೆ ಸಲ್ಲಿಸುವುದು. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆಗಳಲ್ಲಿನ ಕೈಗಾರಿಕಾ ಪ್ರದೇಶಗಳಿಗೆ ನಿವೇಶನ ಕೋರುವ ಅರ್ಜಿಗಳನ್ನು ಕೆ.ಐ.ಎ.ಡಿ.ಬಿ ಕೇಂದ್ರ ಕಛೇರಿ/ಕರ್ನಾಟಕ ಉದ್ಯೋಗ ಮಿತ್ರ, ಬೆಂಗಳೂರು ಇಲ್ಲಿಗೆ ಸಲ್ಲಿಸುವುದು.

- ವಿವರವಾದ ಯೋಜನಾ ವರದಿ ದ್ವಿಪ್ರತಿಯಲ್ಲಿ
- ಸಂಘದ ವಿವರಣಾ ಪತ್ರ ಮತ್ತು ನಿಯಮಾವಳಿಗಳು/ಪಾಲುಗಾರಿಕೆ ಕರಾರು ಪತ್ರ/ ಮೆಮೊರೆಂಡಮ್ ಅಂಡ್ ಆರ್ಟಿಕಲ್ಸ್ ಆಫ್ ಅಸೋಷಿಯೇಷನ್ ಅನ್ವಯಿಸುವಂತೆ ದ್ವಿಪ್ರತಿಯಲ್ಲಿ.
- ಉದ್ಯೋಗ ಆಧಾರ್ ನೋಂದಣಿ ಪ್ರಮಾಣ ಪತ್ರ
- ಭೂಮಿಯ ಉದ್ದೇಶಿತ ಉಪಯೋಗವನ್ನು ಸೂಚಿಸುವ ನಕ್ಷೆ.
- ಮುಂಗಡ ಠೇವಣಿಯಾಗಿ ಎಕರೆಯೊಂದಕ್ಕೆ ರೂ. 5000/-ಗಳು.
- ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ / ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ / ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಅನುಮೋದನಾ ಪತ್ರ

ಕೈಗಾರಿಕಾ ನಿವೇಶನಗಳ ಹಣ ಪಾವತಿಸುವ ನಿಯಮಗಳು

| | |
|---|---|
| ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ತುಮಕೂರು, ಮೈಸೂರು, ಹಾಸನ, ದಾರವಾಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳ ನಿವೇಶನ ಬೆಲೆಯನ್ನು ಪಾವತಿಸುವ ವಿಧಾನ (ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ) | ಅ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ 30 ರಷ್ಟು ಹಣವನ್ನು ಮುಂಗಡವಾಗಿ ಪಾವತಿಸುವುದು.<br>ಆ. ನಿವೇಶನ ಹಂಚಿಕೆಯಾದ ದಿನದಿಂದ 90 ದಿನಗಳ ಒಳಗಾಗಿ ನಿವೇಶನದ ಬಾಕಿ 70% ಬೆಲೆಯನ್ನು ಪಾವತಿಸುವುದು. |
| ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶಗಳ ನಿವೇಶನ ಬೆಲೆಯನ್ನು ಪಾವತಿಸುವ ವಿಧಾನ. (ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ) | ಅ ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ 20 ರಷ್ಟು ಹಣವನ್ನು ಮುಂಗಡವಾಗಿ ಪಾವತಿಸುವುದು.<br>ಆ ನಿವೇಶನ ಹಂಚಿಕೆಯಾದ ದಿನದಿಂದ 90 ದಿನಗಳ ಒಳಗಾಗಿ ನಿವೇಶನದ ಬಾಕಿ 80% ಬೆಲೆಯನ್ನು ಪಾವತಿಸುವುದು. |
| ಮಹಿಳಾ ಉದ್ದಿಮೆದಾರರು ನಿವೇಶನದ ಬೆಲೆಯನ್ನು ಪಾವತಿಸುವ ವಿಧಾನ. | ಅ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ. 10 ರಷ್ಟು ಮೊತ್ತವನ್ನು ಮುಂಗಡ ಠೇವಣಿಯಾಗಿ ಅರ್ಜಿಯ ಜೊತೆ ಪಾವತಿಸುವುದು.<br>ಆ. ನಿವೇಶನ ಹಂಚಿಕೆಯಾದ ದಿನದಿಂದ |

| | |
|---|---|
| | 180 ದಿನಗಳ ಒಳಗಾಗಿ ನಿವೇಶನದ ಬಾಕಿ 90% ಬೆಲೆಯನ್ನು ಪಾವತಿಸುವುದು. |
| ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಅಂಗವಿಕಲ ಉದ್ದಿಮೆದಾರರು ಮತ್ತು ಮಾಜಿ ಸೈನಿಕರು ನಿವೇಶನದ ಬೆಲೆಯನ್ನು ಪಾವತಿಸುವ ವಿಧಾನ. | ಇ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ. 20/30 ರಷ್ಟು ಮೊತ್ತವನ್ನು ಮುಂಗಡ ಠೇವಣಿಯಾಗಿ ಅರ್ಜಿಯ ಜೊತೆ ಪಾವತಿಸುವುದು.<br>ಈ. ನಿವೇಶನ ಹಂಚಿಕೆಯಾದ ದಿನದಿಂದ 6 ಸಮ ತ್ರೈಮಾಸಿಕ ಕಂತುಗಳಲ್ಲಿ ನಿವೇಶನದ ಬಾಕಿ ಶೇ.80/70 ಬೆಲೆಯನ್ನು ಪಾವತಿಸುವುದು. |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರು | ಉ. ಮಂಡಳಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವ ಜಮೀನಿನ ಹಂಚಿಕೆ ದರದಲ್ಲಿ ಶೇ.75ರ ರಿಯಾಯಿತಿಯನ್ನು ನೀಡಲಾಗುವುದು ಮತ್ತು ಈ ಮೊತ್ತವನ್ನು ಸರ್ಕಾರದಿಂದ **SCP/TSP** ಯೋಜನೆಯಡಿ ಬಿಡುಗಡೆಯಾಗುವ ಅನುದಾನದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.<br>ಊ. ಮಂಡಳಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಂದ ನಿವೇಶನ ಹಂಚಿಕೆ ದರದ ಮೇಲೆ ಶೇ.10ರ ಹಣವನ್ನು ಅರ್ಜಿಯ ಜೊತೆಗೆ ಪ್ರಾರಂಭಿಕ ಠೇವಣಿಯನ್ನಾಗಿ ಪಾವತಿಸಿಕೊಂಡು ಹಂಚಿಕೆ ಪತ್ರ ನೀಡುವುದು ಮತ್ತು ಸ್ವಾಧೀನ ಪತ್ರ ನೀಡುವುದು.<br>ಋ. ನಿವೇಶನ ಹಂಚಿಕೆ ದರದ ಬಾಕಿ ಶೇ. 15 ರ ಹಣವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ಶೇ.10 ರಷ್ಟು ಬಡ್ಡಿಯೊಂದಿಗೆ ಸ್ವಾಧೀನಪತ್ರ ನೀಡಿದ ದಿನಾಂಕದಿಂದ ವಸೂಲಾತಿ ಮಾಡಿಕೊಳ್ಳುವುದು ಮತ್ತು ಸದರಿ ಮೊತ್ತವನ್ನು ನಿಗದಿತ ಅವಧಿಯಲ್ಲಿ ಪಾವತಿಸುವ ಕುರಿತು ಉದ್ದಿಮೆದಾರರಿಂದ ಸೂಕ್ತ ಮುಚ್ಚಳಿಕೆ ಪತ್ರ ಪಡೆದುಕೊಳ್ಳಲಾಗುವುದು. |

ಹಂಚಿಕೆಯಾದ ನಿವೇಶನದ ಪೂರ್ಣ ಮೊತ್ತವನ್ನು ಪಾವತಿಸಿದ ನಂತರ ಹಂಚಿಕೆಯ ದೃಢೀಕರಣದ ಪತ್ರವನ್ನು ನೀಡಿ ನಿವೇಶನದ ಸ್ವಾಧೀನ ಪತ್ರ ನೀಡಲಾಗುವುದು. ನಂತರ ಗುತ್ತಿಗೆ ಕರಾರು ಪತ್ರವನ್ನು ನೆರವೇರಿಸಲಾಗುವುದು. (02 ಎಕರೆ ವಿಸ್ತೀರ್ಣದ ವರೆಗೆ 10 ವರ್ಷ ಗುತ್ತಿಗೆ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗುವುದು. 02 ಎಕರೆಗೆ ಮೇಲ್ಪಟ್ಟ ವಿಸ್ತೀರ್ಣಕ್ಕೆ 99 ವರ್ಷ ಗುತ್ತಿಗೆ ಅವಧಿಗೆ ಗುತ್ತಿಗೆ ಕರಾರು ಪತ್ರ ನೆರವೇರಿಸಲಾಗುವುದು) ಹಾಗೂ ಏಕ ಘಟಕ ಸಂಕೀರ್ಣ ಯೋಜನೆಗಳಿಗೆ ಜಮೀನು ಹಂಚಿಕೆಯನ್ನು 15 ವರ್ಷಗಳ ಗುತ್ತಿಗೆ ಮತ್ತು ಕ್ರಯದ ಆಧಾರದ ಮೇಲೆ ಗುತ್ತಿಗೆ ಕರಾರು ಪತ್ರ ನೆರವೇರಿಸಿಕೊಡಲಾಗುವುದು.